ವೇದವೆಂಬುದು ಓದಿನ ಮಾತು;
ಶಾಸ್ತ್ರವೆಂಬುದು ಸಂತೆಯ ಸುದ್ದಿ,
ಪುರಾಣವೆಂಬುದು ಪುಂಡರ ಗೋಷ್ಠಿ,
ತರ್ಕವೆಂಬುದು ತಗರ ಹೋರಟೆ.
ಭಕ್ತಿ ಎಂಬುದು ತೋರಿ ಉಂಬ ಲಾಭ,
ಗುಹೇಶ್ವರನೆಂಬುದು ಮೀರಿದ ಘನವು.

ಅಲ್ಲಮಪ್ರಭು



ಬಸವಾಪುರ ತಲ್ಲಣಿಸಿಹೋಗಿತ್ತು.

ತಲ್ಲಣಕ್ಕೆ ಕಾರಣವಾದದ್ದು ಮಾತ್ರ ಒಂದು ಕ್ಷುಲ್ಲಕ ಘಟನೆ. ಹತ್ತಿರತ್ತಿರ ನೂರು ವರ್ಷಗಳಿಂದ ನಗರದ ಮಧ್ಯದಲ್ಲಿದ್ದ ಕನ್ನಡ ಸಂಘದ ಗ್ರಂಥ ಭಂಡಾರಕ್ಕೆ ಯಾರೋ ಬೆಂಕಿ ಕೊಟ್ಟು ಅಲ್ಲಿದ್ದ ಪುಸ್ತಕಗಳು ಸುಟ್ಟುಹೋಗಿದ್ದವು.

ಈ ಪುಸ್ತಕಗಳು ಸುಟ್ಟುಹೋದದ್ದಕ್ಕೆ ನಗರದ ಜನ ಯಾಕೆ ತಲ್ಲಣಿಸಿಹೋದರೋ ಎಂಬುದನ್ನು ಯೋಚಿಸಿದರೆ ಯೋಚಿಸಿದವರ ತಲೆಯೇ ಹಾಳಾಗಿ ಹೋಗುವ ಸಾಧ್ಯತೆಯಿತ್ತು. ಯಾಕೆಂದರೆ ಆ ಕನ್ನಡಸಂಘದಲ್ಲಿದ್ದ ಗ್ರಂಥ ಭಂಡಾರಕ್ಕೂ ಆ ನಗರದ ಜನರಿಗೂ ಒಂದ್ದೊತ್ತಿನ ಸಂಬಂಧವೂ ಇರಲಿಲ್ಲ. ಜುಬ್ಬಾ, ಅದರ ಮೇಲೊಂದು ಕೋಟು ಹಾಕಿಕೊಂಡು ಸಾಹಿತಿಗಳ ಗೆಟಪ್ಪಿನಲ್ಲಿ ತಿರುಗುತ್ತಿದ್ದ ಕನ್ನಡ ಸಂಘದ ಪದಾಧಿಕಾರಿಗಳೇ ಆ ಪುಸ್ತಕಗಳನ್ನು ಮೂಸಿಯೂ ನೋಡುತ್ತಿರಲಿಲ್ಲ. ಉದ್ಯೋಗ ಪಡೆಯಲೋ, ಬಡ್ತಿ ಗಿಟ್ಟಿಸಲೋ ಯೆಮ್ಮೆ ಓದಿದವರು, ಯೆಮ್ಮೆ ಓದಿ ಲೆಕ್ಚರರಾದವರು ಡಾಕ್ಟರೇಟು ಮಾಡಲು ಹಳೇ ಪುಸ್ತಕ ಹುಡುಕಿಕೊಂಡು ಇಲ್ಲಿಗೆ ಬಂದು ಪುಸ್ತಕದ ದೂಳು ಕೊಡವಿ ಹೋಗುವುದು ಎಲ್ಲೋ ವರ್ಷಕ್ಕೆ ಒಂದೋ ಎರಡೋ ಬಾರಿಯಾಗಿತ್ತಷ್ಟೆ. ಒಮ್ಮೆ ಪುಸ್ತಕ ಹುಡುಕಿ ಬಂದವರು ಎರಡನೇ ಬಾರಿ ಬರುವ ಚಾನ್ಸೇ ಇರಲಿಲ್ಲ. ಪುಸ್ತಕ ಹುಡುಕಿ ಬರುವ ಈ ಯೆಮ್ಮೆಗಳಿಗೆ ನೂರು ಪ್ರಶ್ನೆ ಕೇಳಿ, ನಾಲ್ಕಾರು ಬಾರಿ ಸತಾಯಿಸಿ ಗುಮಾಸ್ತ ಶಿವಪ್ಪ ಪುಸ್ತಕ ದಯಪಾಲಿಸುತ್ತಿದ್ದುದೇ ಇದರ ಹಿನ್ನೆಲೆಯಾಗಿತ್ತು. ಈ ಯೆಮ್ಮೆಗಳು ಕೆಲವೊಮ್ಮೆ ಪುಸ್ತಕ ಒಯ್ದು ಮರಳಿ ಕೊಡದಿರುವುದೂ ಶಿವಪ್ಪ ಹೀಗೆ ಮಾಡಲು ಒಂದಿಷ್ಟು ಕಾರಣವಾಗಿತ್ತು. ಧರ್ಮೋದ್ಧಾರಕ ಸಂಘದವರು ಪೂಜೆ ಮಾಡಿಸಿ ಗ್ರಂಥ ಭಂಡಾರಕ್ಕೆ ದಾನ ಮಾಡಿದ್ದ ಭಗವದ್ಗೀತೆ ಪುಸ್ತಕವನ್ನು ಅವರು ದಾನ ಮಾಡಿದ ಒಂದೆರಡು ದಿನಗಳಲ್ಲೇ ತೆಗೆದುಕೊಂಡು ಹೋದ ಯೆಮ್ಮೆಯೊಬ್ಬ ನಾಲ್ಕು ತಿಂಗಳಿಂದ ನಾಪತ್ತೆಯಾಗಿಬಿಟ್ಟಿದ್ದ.

ಇನ್ನು ಆ ಕನ್ನಡ ಸಂಘ ಏರ್ಪಡಿಸುವ ಸಾಹಿತಿಗಳ ಭಾಷಣ ಕೇಳಲು ಮನೆಯ ಕಿರಿಕಿರಿ ತಪ್ಪಿಸಿಕೊಳ್ಳಲು ಬಯಸುವ ಕೆಲ